**CC No.**3171/2024 -- **PW**: 1

<u>**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**</u>

<u>**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**</u>

**ದಿಃ 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಬಿ ಹೆಚ್ ವಕೀಲರಿಂದಃ**

ಪಿರ್ಯಾದಿ ಸಂಸ್ಥೆ ನೊಂದಾಯಿತ ಸಂಸ್ಥೆಯಾಗಿರುತ್ತದೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಆದರೆ ಇನ್ನೂ ಮುಂದೆ ಹಾಜರಪಡಿಸುತ್ತೇನೆ. 2021 ರಿಂದ ಇದುವರೆಗೂ ನಾನು ಪಿರ್ಯಾದಿ ಸಂಸ್ಥೆಯಲ್ಲಿ ರಿಕವರಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ಹಾಜರಾಗಲು ಹಾಗೂ ಪ್ರಕರಣವನ್ನು ನೋಡಿಕೊಳ್ಳಲು ನನಗೆ ಪಿರ್ಯಾದಿ ಸಂಸ್ಥೆಯವರು ಠರಾವ ಪಾಸ್ ಮಾಡಿ ಅಧಿಕಾರ ನೀಡಿರುತ್ತಾರೆ. ಠರಾವಿನಲ್ಲಿ ಸಾಕ್ಷಿ ನುಡಿಯಲು ಮತ್ತು ಪಿರ್ಯಾದಿಗೆ ಸಹಿ ಮಾಡಲು ಅಧಿಕಾರ ನೀಡಿರುತ್ತದೆ ಎಂದು ಉಲ್ಲೇಖಿಸಿದಲ್ಲಿ ಮಾತ್ರ ನನಗೆ ಈ ಪ್ರರಕಣದಲ್ಲಿ ಪಿರ್ಯಾದಿಗೆ ಸಹಿ ಮಾಡಲು ಹಾಗೂ ಸಾಕ್ಷಿ ನುಡಿಯಲು ಅಧಿಕಾರ ಪ್ರಾಪ್ತವಾಗುತ್ತದೆ ಎಂದರೆ ಸಾಕ್ಷಿ ನಾವು ಎಲ್ಲ ಪ್ರಕರಣದಲ್ಲಿ ಅದೇ ರೀತಿ ಠರಾವ ಮಾಡುತ್ತೇವೆಂದು ನುಡಿಯುತ್ತಾರೆ. ನಿಪಿ.1 ದಾಖಲೆಯಲ್ಲಿ ಈ ಪ್ರಕರಣದಲ್ಲಿ ನನಗೆ ಸಾಕ್ಷಿ ನುಡಿಯಲು ಅಧಿಕಾರ ಇದೆ ಎಂದು ಉಲ್ಲೇಖಿಸಿಲ್ಲ ಎಂದರೆ ಸರಿ. ಹಾಗಾಗಿ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಸದರಿ ದಾಖಲೆಯನ್ನು ನಾನು ಸೃಷ್ಟಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

2. ಚಿಟ್ ಫಂಡ್ ನಲ್ಲಿ ದಾಖಲೆಗಳ ಪ್ರಕಾರ ಸದಸ್ಯರ ವ್ಯವಹಾರಗಳು ಆಗುತ್ತವೆ. ಸದರಿ ದಾಖಲೆಗಳನ್ನು ನೀವು ನ್ಯಾಯಾಲಯದಲ್ಲಿ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಹೌದು ಇನ್ನೂ ಮುಂದೆ ಹಾಜರಪಡಿಸುತ್ತೇನೆಂದು ನುಡಿಯುತ್ತಾರೆ.

(**ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು**).

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**